(viii) ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಹೃದಯತಜ್ಞರನ್ನು ಒದಗಿಸುವ ಬಗ್ಗೆ

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ಬಳ್ಳಾರಿಯಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಹಾರ್ಟ್ ಸ್ಪೆಷಲಿಸ್ಟ್ ಯಾರೂ ಇಲ್ಲ. ಪೋಸ್ಟ್‌ಗ್ರಾಜುಯೇಷನ್ ಇವೆಲ್ಲಾ ಇದೆ. ಇತ್ತೀಚೆಗೆ ಹಾರ್ಟ್ ಅಟಾಕ್ ಕೇಸಸ್ ಬರುವುದು ಜಾಸ್ತಿಯಾಗಿದೆ. ಅಲ್ಲಿಗೆ ಹೆಚ್ಚು ಕಡಿಮೆ, ಹಾರ್ಟ್ ಸ್ಪೆಷಲಿಸ್ಟ್, 7-8 ವರ್ಷಗಳಿಂದ ಯಾರೂ ಬಂದಿಲ್ಲ. ಯಾರನ್ನಾದರೂ ಒಬ್ಬರಿಬ್ಬರನ್ನು ಪೋಸ್ಟ್ ಮಾಡಿ ಒಬ್ಬರಿಯ ಪ್ರೊಫೆಸರ್ಸನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಆಸ್ಪತ್ರೆಯಲ್ಲಿ ಸರಿಯಾದ ರೀತಿಯಲ್ಲಿ ಔಷಧಿಯಾಗಲೀ, ವೈದ್ಯರಾಗಲೀ ಇಲ್ಲ. ಆದ್ದರಿಂದ ನಮಗೆ ಆಶ್ವಾಸನೆ ಕೊಟ್ಟು ಬಳ್ಳಾರಿ ಕಾಲೇಜಿಗೆ ಒಬ್ಬರಿಯ ಪ್ರೊಫೆಸರನ್ನು ಕಳಿಸಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ವಿಭಾಗದಲ್ಲಿ ಹೃದಯ ರೋಗದಿಂದ ಅಧಿಕ ಜನರು ಸಾಯುತ್ತಿರುವ ಬಗ್ಗೆ ಯಾವ ವರದಿಯೂ ಅಧಿಕೃತವಾಗಿ ಬಂದಿರುವುದಿಲ್ಲ. ಈ ಹೃದಯ ರೋಗಕ್ಕೆ ಚಿಕಿತ್ಸೆ ನೀಡಲು ಇಲ್ಲಿರುವ ವೈದ್ಯಕಾಸ್ತ್ರ ಪ್ರಾಧ್ಯಾಪಕರುಗಳು ಸಾಕಷ್ಟು ಅನುಭವ ಮತ್ತು ತರಬೇತಿ ಪಡೆದಿರುವವರು. ಸದ್ಯದ ಪರಿಸ್ಥಿತಿಯಲ್ಲಿ ಹೃದಯ ತಜ್ಞರ ಅಭಾವವು ದೇಶದ ಎಲ್ಲೆಡೆಯಲ್ಲಿಯೂ ಇರುವುದರಿಂದ, ಸರ್ಕಾರವು ಇದನ್ನು ಗಮನಿಸಿ, ಇತ್ತೀಚೆಗೆ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

ಈ ವಿಭಾಗದಲ್ಲಿ ತಜ್ಞರಿಗೆ ತರಬೇತಿ ನಿಡಲು ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಸ್ನಾತಕೋತ್ತರ ವಿಭಾಗವನ್ನು ಈ ವರ್ಷದಿಂದ ತೆರೆಯಲಾಗಿದೆ. ಸಾಕಷ್ಟು ತಜ್ಞರು ದೊರೆತಂತೆ ಎಲ್ಲಾ ಕಾಲೇಜುಗಳಿಗೂ ಹೃದಯ ತಜ್ಞರನ್ನು ಒದಗಿಸಲಾಗುವುದು. ಈ ವರ್ಷ, ಈ ಸೌಲಭ್ಯವನ್ನು ಮೈಸೂರು ವೈದ್ಯಕೀಯ ಕಾಲೇಜಿಗೆ ಒದಗಿಸಲಾಗಿದ್ದು, ಬಳ್ಳಾರಿ ಕಾಲೇಜಿಗೆ ಇದನ್ನು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸುವ ಪರಿಶೀಲನೆಯಲ್ಲಿದೆ.

(ix) ಮೈಸೂರು ವಿದ್ಯುತ್ ಲ್ಯಾಂಪ್ ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್‌ವರ ದರಾಡಳಿತ ದಿಂದ ಆಸ ನಷ್ಟದ ಬಗ್ಗೆ.

ಶ್ರಿ ಎಸ್. ಬಂಗಾರಪ್ಪ.—ಮಾನ್ಯಸಭಾಧ್ಯಕ್ಷರೇ, ಮಾನ್ಯ ಕೈಗಾರಿಕಾ ಸಚಿವರು ಇರುವುದು ಒಳ್ಳೆಯದಾಯಿತು. ಮೈಸೂರು ವಿದ್ಯುತ್ ಲ್ಯಾಂಪ್ ಕಾರ್ಖಾನೆ 45-56 ವರ್ಷಗಳ ಹಿಂದೆ ಸ್ಥಾಪನೆಯಾಗಿರತಕ್ಕ ಕಾರ್ಖಾನೆ. ಇದರ ಹಿಂದಿನ ಚರಿತ್ರೆ ನಮಗೆ ಬೇಕಾಗಿಲ್ಲ. ನಮಗೆ ಗೊತ್ತಿರುವಹಾಗೆ, ನಮ್ಮ ಕಾರ್ನಾಟಕ ಸರ್ಕಾರ ಸುಮಾರು 75 ಪರ್ಸೆಂಟ್ ಬಂಡವಾಳವನ್ನು ಅದರಲ್ಲಿ ಇಟ್ಟುಕೊಂಡಿದೆ ಎನ್ನುವ ವಿಚಾರವನ್ನು ಕೇಳಿದ್ದೇನೆ. ಇದಕ್ಕೆ ಒಬ್ಬರು ಮ್ಯಾನೇಜಿಂಗ್ ಡೈರಕ್ಟರ್ ಮನ್‌ಚನ್ ಎಂಬುವರನ್ನು ನೇಮಕ ಮಾಡಿದ್ದಾರೆ. ಮೊದಲು ಒಬ್ಬರು ಇದ್ದರು ಎನ್ನುವ ವಿಚಾರವನ್ನು ಕೇಳಿದ್ದೆ. ಇದರ ಬಂಡವಾಳದ ಸಾಮರ್ತ್ಯವನ್ನು ನಮ್ಮ ಸರ್ಕಾರ ವಹಿಸಿಕೊಂಡದ್ದು 1979ನೇ ಸಾಲಿನಲ್ಲಿ. ಇತ್ತೀಚೆಗೆ 2-3 ವರ್ಷಗಳಲ್ಲಿ ಹೆವಿಲಾಸ್‌ನಲ್ಲಿ ಮೈಸೂರು ಲ್ಯಾಂಪ್ಸ್ ಕಾರ್ಖಾನೆ ನಡೆಯುತ್ತಿದೆ. ಇದರಲ್ಲಿ ನಾವು ಎಷ್ಟು ಇನ್‌ವೆಸ್ಟ್ ಮಾಡಿದ್ದೇವೆ, ಅದರಿಂದ ಲಾಭ ಪಡೆಯುವುದಕ್ಕೆ ಸಾಧ್ಯತೆ ಇದ್ದರೂ ಕೂಡ ಆಡಳಿತ ಹಲವಾರು ದೋಷಗಳಿಂದ ಕೂಡಿದೆ ಎನ್ನತಕ್ಕ ವಿಚಾರವನ್ನು ನಾವೆಲ್ಲಾ ಕೇಳಿದ್ದೇವೆ. ಇಲ್ಲಿ ಹೆಚ್ಚು ಪ್ರಸ್ತಾಪ ಮಾಡದೇ 3-4 ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಮ್ಯಾನೇಜಿಂಗ್ ಡೈರಕ್ಟರ್ ಉತ್ತರ ಭಾರತದವರು ಎನ್ನತಕ್ಕ ಭಾವನೆಯಲ್ಲ. ಇಲ್ಲೂ ಕೂಡ ಆಡಳಿತದ ಅನುಭವ ಇರತಕ್ಕಂಥವರು ಮ್ಯಾನೇಜಿಂಗ್ ಡೈರಕ್ಟರ್ ಆಗಿ ಕೆಲಸ ಮಾಡಲು ಶಕ್ತಿಸಾಮರ್ಥ್ಯ ಪಡೆದಿರತಕ್ಕವರು ಇದ್ದಾರೆ. 1968-69ನೇ ಇಸವಿಯಲ್ಲಿ ಇವರನ್ನು ಇಲ್ಲಿಗೆ ತಂದರು. ಅವರು ಒಬ್ಬರಿಯ ಸೇವೆ ಕೊಟ್ಟಿದ್ದರೆ ಶ್ಲಾಘನೆ ಮಾಡೋಣ. ಈ ಬಗ್ಗೆ ಸಂಪೂರ್ಣವಾಗಿ ದಾಖಲೆಗಳ ಸಹಿತ ವಿಚಾರ ಮಾಡಿದರೆ, ಗೊತ್ತಾಗುತ್ತದೆ. ಕಂಪನಿ ಹಣ ಲೂಟಿ ಆಗುವುದಕ್ಕೆ ಅವರು ಅವಕಾಶ ಕೊಟ್ಟಿದ್ದಾರೆ. ಅವರು ಎಲ್. ಟಿ. ಸಿ. ಪ್ರವಾಸ ಮಾಡಿದ ಬಗ್ಗೆ, ಅವರ ಹೆಂಡತಿ ಮಕ್ಕಳು ಪ್ರವಾಸ ಮಾಡಿದ ಬಗ್ಗೆ ಎಲ್ಲಾ ವಿವರಗಳು ಇವೆ. ಒಂದೊಂದು ಸಾರಿ 10 ಸಾವಿರ, 20 ಸಾವಿರ ಡ್ರಾ ಮಾಡಿದ ವಿವರಗಳು ಇವೆ. ಸಿಂಗಪುರಕ್ಕೆ ಆಹ್ವಾನದ ಮೇಲೆ ಹೋದರೋ ಏನೋ ಗೊತ್ತಿಲ್ಲ. ಇಲ್ಲಿರತಕ್ಕಂಥಹವರು ಕಂಪನಿ ಹಣವನ್ನು ಡ್ರಾ ಮಾಡಿದ್ದಾರೆ. ಇವೆಲ್ಲಾ ದಾಖಲಾತಿಗಳು ಇವೆ. ಈ ದಾಖಲೆಗಳಿಂದ ಪೂರ್ತಿ ಹಣ ಪೋಲು ಮಾಡಿದ್ದಾರೆ ಎನ್ನತಕ್ಕ ವಿಚಾರ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎರಡು ಕೋಟಿ 15 ಲಕ್ಷ ರೂಪಾಯಿ ಮೌಲ್ಯದ ಜಿ, ಎಲ್. ಎಲ್. ಲ್ಯಾಂಪ್ಸ್ ವಿಚಾರದಲ್ಲೂ ಕೂಡ ಕೋಟಿಗಟ್ಟಲೆ ಹಣ ಕಂಪನಿಗೆ ಲಾಸ್ ಆಗುವುದಕ್ಕೆ ಕಾರಣರಾಗಿದ್ದಾರೆ. ಇಲ್ಲಿ ಸಾಧ್ಯವಿದ್ದರೂ ಕೂಡ, ಬೊಂಬಾಯಿ, ಗುಜರಾತ್, ಉತ್ತರಭಾರತದಿಂದ ಖರೀದಿ ಮಾಡಿದ್ದಾರೆ. ಅವರ ಮೇಲೆ ಗುರುತರವಾದ ಆಪಾದನೆಗಳು ಸಾಕಷ್ಟು ಇವೆ. ಕಳೆದ 2-3 ವರ್ಷದಲ್ಲಿ ಒಂದು ಲಕ್ಷದ ಒಂದು ಸಾವಿರ ಮರ್ಕ್ಯುರಿ ವೇಪರ್ ಲ್ಯಾಂಪ್, ಬಜಾಜಾ ಡನ್ಸ್‌ಪ್ ಲ್ಯಾಂಪ್ಸ್ ಇದನ್ನೆಲ್ಲಾ ತಯಾರು ಮಾಡಿರತಕ್ಕಂಥ ಶಕ್ತಿಸಾಮರ್ಥ್ಯ ಇದೆ. ಪೂರ್ತಿ ಎಲ್ಲಾ ಲಾಸ್ ಆಗುವುದಕ್ಕೆ ಎಷ್ಟು

ಬೇಕೋ ಅಷ್ಟನ್ನು ಮಾಡಿರತಕ್ಕಂಥಾದ್ದು ಅಲ್ಲಿ ನಡೆದಿದೆ. ಒಂದು ಲಕ್ಷ 20 ಸಾವಿರ, ಒಂದೊಂದು ಐಟಂನಲ್ಲಿ ಹೋಗಿದೆ ಎಂದು ಸಂಪೂರ್ಣವಾಗಿ ಗೊತ್ತಾಗುತ್ತದೆ.

ಮಾನ್ಯ ಸಭಾಧ್ಯಕ್ಷರೇ, ಇವರು ಆಡಳಿತ ಮಂಡಳಿಯ ನಿರ್ದೇಶಕರೂ ಆಗಿರುವುದರಿಂದ ಇಷ್ಟೊಂದು ನಷ್ಟವಾಗಿರುವುದಕ್ಕೆ ಕಾರಣವಾಗಿದೆ. ಈ ಬಗ್ಗೆ ಹೇಳಬೇಕಾದರೆ ನನ್ನ ಹತ್ತಿರ ಒಂದು ಪಟ್ಟಿಯೇ ಇದೆ. ಆದರೆ ಈಗ ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಅದನ್ನು ಸಲ್ಪ ಕಟ್ ಷಾರ್ಟ್ ಮಾಡಿ ಹೇಳುತ್ತಿದ್ದೇನೆ. ಈ ಮೈಸೂರು ಲ್ಯಾಂಪ್ಸ್‌ಗೆ ಕರ್ನಾಟಕ ಸರ್ಕಾರದವರ 75 ಪರ್ಸೆಂಟ್ ನಷ್ಟು ಬಂಡವಾಳ ಹೂಡಿದ್ದಾರೆ. ಅಷ್ಟು ಕೋಟಿಗಟ್ಟಲೆ ಬಂಡವಾಳ ಹಾಕಿದ್ದರೂ ಇದರಲ್ಲಿ ಲಾಸ್ ಆಗುವುದಕ್ಕೆ ಇವರ ಒಂದು ನೀತಿಯೇ ಕಾರಣ. ಇವರ ಮೇಲೆ ಗುರುತರವಾದ ಆರೋಪಗಳು ಇವೆ. ಅದರ ವಿವರಣೆಗಳನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ಅದರ ಮೇಲೆ ತತ್‌ಕ್ಷಣ ಕ್ರಮ ತೆಗೆದುಕೊಂಡು ಅವರನ್ನು ತೆಗೆದುಹಾಕಬೇಕು ಇಲ್ಲದೇ ಹೋದರೆ ಅಲ್ಲಿ ಕೋಟಿಗಟ್ಟಲೆ ಲಾಸ್ ಆಗುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಅವರ ಮೇಲೆ ಸಾಕಷ್ಟು ಆಪಾದನೆಗಳು ಇವೆ. ಅವರನ್ನು ತೆಗೆದು ಹಾಕಿದರೆ ಬೇರೆಯವರು ಒಳ್ಳೆಯವರು ಸಿಗುವುದಿಲ್ಲವೇ ? ಅವರ ಬದಲು ಒಬ್ಬ ಕನ್ನಡಿಗರನ್ನೇ ಹಾಕಿ. ಅದಕ್ಕೆ ಹಾಕಿರುವ ಬಂಡವಾಳ ಸಾರ್ವಜನಿಕರ ದುಡ್ಡು. ಅವರು 1968 ರಿಂದ ಇದ್ದುಕೊಂಡು ಹೆಚ್ಚು ಹಣ ಮಾಡಿಕೊಂಡಿದ್ದಾರೆ. ಅಲ್ಲದೇ ಬೇಕಾದಷ್ಟು ಆಸ್ತಿ ಪಾಸ್ತಿಗಳನ್ನು, ಮನೆ ಮಠಗಳನ್ನೂ ಮಾಡಿಟ್ಟಿದ್ದಾರೆ. ಅವರು ಮುಂದಿನ ಪೀಳಿಗೆಗಾಗುವಷ್ಟು ಆಸ್ತಿಪಾಸ್ತಿ ಮಾಡಿಕೊಂಡಿದ್ದಾರೆ. ಮಾನ್ಯ ಎಂ. ಎಸ್. ಕೃಷ್ಣನ್ ರವರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುವಾಗ ಇದರ ಬಗ್ಗೆಯೂ ಸಾಕಷ್ಟು ವಿವರಣೆಗಳನ್ನು ಕೊಟ್ಟು ಮಾತನಾಡಿದ್ದಾರೆ. ತಾವು ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರೋ ಏನೋ ನನಗೆ ಗೊತ್ತಿಲ್ಲ. ಇನ್ನೊಂದು ವಿಚಾರ ಏನೆಂದರೆ ಅವರ ಟರ್ಮ್ ಮೇ 22 ಕ್ಕೆ ಮುಗಿಯುತ್ತದೆ. ಮತ್ತೆ ಅವರು ಎಕ್ಸ್‌ಟೆನ್‌ಷನ್‌ಗೆ ಓಡಾಡುತ್ತಿದ್ದಾರೆ. ಕೆಲವು ಐ. ಎ. ಎಸ್. ಆಫೀಸರ್ ಅವರ ಮೇಲೆ ಪಾಮೀಲಾಗಿ ದೊಡ್ಡ ದೊಡ್ಡ ನೋಟನ್ನು ಹಾಕುವುದಕ್ಕೆ ತಯಾರಾಗಿದ್ದಾರೆ. ಈ ಐ. ಎ. ಎಸ್ ಆಫೀಸರ್ಸ್‌ನ್ನೂ ಸಹ ತಾವು ಕಂಟ್ರೋಲ್ ಮಾಡಬೇಕಾಗಿದೆ. ಒಟ್ಟಿನಲ್ಲಿ ಹೇಳಬೇಕಾದರೆ ಅವರು 1968ನೇ ಇಸವಿಯಿಂದಲೂ ಇದ್ದು ಬೇಕಾದಷ್ಟು ಹಣ ಆಸ್ತಿ ಪಾಸ್ತಿ ಮಾಡಿಕೊಂಡಿದ್ದಾರೆ ಸಾಕು. ಈಗ ಅದರಲ್ಲಿ ಲಾಭ ಬರುವ ಹಾಗೆ ಬೇರೆಯವರನ್ನು ಅಲ್ಲಿಗೆ ಹಾಕಬೇಕೆಂದು ನನ್ನ ಸಲಹೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—ಮಾನ್ಯ ಎಂ.ಎಸ್. ಕೃಷ್ಣನ್‌ರನರು ಮತ್ತು ಇತರೇ ಸದಸ್ಯರು ಇರುವ ಮೇಲೆ ಆಪಾದನೆಯನ್ನು ಮಾಡಿದ್ದಾರೆ, ಬೇರೆ ಕಡೆಯಿಂದಲೂ ಕೂಡ ಇವರ ಬಗ್ಗೆ ಆಪಾದನೆ ಪಟ್ಟಿ ಬಂದಿದೆ. ಮಾನ್ಯ ಸದಸ್ಯರೂ ಸಹ ಆಪಾದನೆ ಪಟ್ಟಿಯನ್ನು ಕೊಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ತನಿಖೆ ನಡೆಯುತ್ತಾ ಇದೆ. ಆದುದರಿಂದ ಈಗಲೇ ಇದರ ವಿಚಾರದಲ್ಲಿ ಉತ್ತರ ಕೊಡಬೇಕು ಎಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ತಮಗೆ ಹೇಳಬೇಕಾದರೆ ಮೇಲ್ಮನೆಯಲ್ಲಿ 10 ಜನ ಸದಸ್ಯರು ಒಳ್ಳೆಯ ಅನುಭವಿಗಳು, ಇವರು ಚೆನ್ನಾಗಿ ಈ ಕಾರ್ಖಾನೆಯನ್ನು ನಡೆಸಿಕೊಂಡು ಹೋಗುತ್ತಾರೆ, ಇವರು ಒಳ್ಳೆಯ ಹೆಸರುವಾಸಿಯಾದಂಥಾವರು, ಇವರನ್ನೇ ಇಲ್ಲಿ ಮುಂದುವರೆಸಿಕೊಂಡು ಹೋಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಅದು ಎಷ್ಟರಮಟ್ಟಿಗೆ ಪವರ್‌ವುಲ್ ಲಾಬಿ ಇದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯ್ನಿ.—ಅಲ್ಲಿ ಒಂದು ತರಹ ಲಾಬಿ ಇದೆ, ಹಾಗೆಯೇ ನಿಮ್ಮ ಕಡೆಯೂ ಒಂದು ತರಹಾ ಲಾಬಿ ಇದೆ ; ಎನ್ನುವುದು ಗೊತ್ತಾಗಿದೆ. ನಿಮ್ಮದು ಕನ್ನಡ ಲಾಬಿ.

ಶ್ರೀ ಎಂ. ವೀರಪ್ಪ ಮೋಯಿ.—ಮಾನ್ಯ ಸದಸ್ಯರು ಲಾಬಿ ಪ್ರಶ್ನೆಯನ್ನು ಯಾವ ಅರ್ಥದಲ್ಲಿ ಹೇಳಿದ್ದಾರೆ ಎನ್ನುವುದನ್ನು ಯೋಚನೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇನ್ನು ಬೇರೆ ಯಾವ ಅರ್ಥದಲ್ಲೂ ಹೇಳಿಲ್ಲ. ಅಲ್ಲಿ ಶಾಸಕರು ಇದರ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ ಅಷ್ಟೆ. ಇದೆ ಲಾಬಿಯಲ್ಲಿ ಇಲ್ಲಿ ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಹಾಗೆ ಮೇಲ್ಮನೆಯಲ್ಲೂ ಸಹ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗ ಮಾನ್ಯ ಸದಸ್ಯರು ಅವರ ಮೇಲೆ ಏನೇನು ಆಪಾದನೆಗಳನ್ನು ಹೇಳಿದ್ದಾರೆ ಅದನ್ನು ವಿಚಾರ ಮಾಡುತ್ತೇನೆ. ಇನ್ನು ಅವರನ್ನು ಮುಂದುವರೆಸುವುದರ ಬಗ್ಗೆ ಹೇಳಬೇಕಾದರೆ ಸರ್ಕಾರದವರು, ತಮ್ಮ ಅಭಿಪ್ರಾಯಗಳನ್ನೂ ಸಹ ಗಮನದಲ್ಲಿಟ್ಟುಕೊಂಡು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮತ್ತು ತಾವು ಹೇಳಿದುದರ ಬಗ್ಗೆ ಇನ್‌ವೆಸ್ಟಿಗೇ

ಷನ್ ಮಾಡಿಸುತ್ತೇನೆ. ನಾವು ಆತುರದಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಿಲ್ಲ. ಅಷ್ಟು ಮಾತ್ರ ನಾನು ಹೇಳುತ್ತೇನೆ. ಕಂಪನಿಯ ಹಿತ ದೃಷ್ಟಿಯಿಂದ ಯಾವರೀತಿಯಾಗಿ ನಿರ್ಣಯ ತೆಗೆದುಕೊಳ್ಳಬೇಕೋ ಆರೀತಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೇ ಅವರನ್ನು ಮುಂದುವರೆಸುವ ಹಾಗೆ ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ. ಇದನ್ನು ಸ್ಪಷ್ಟಪಡಿಸಬೇಕು. ಈಗಾಗಲೇ ಈ ಕಂಪನಿಯಲ್ಲಿ ಎಷ್ಟು ಲಾಸ್ ಆಗಿದೆ ಎನ್ನುವುದು ತಮಗೆ ಗೊತ್ತಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಇದರ ಬಗ್ಗೆ ಇನ್ನೂ ಏನೂ ನಿರ್ಣಯ ಮಾಡಿಲ್ಲ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಹೇಳಿದ ಲಾಬಿ ಅನ್ನುವುದಕ್ಕೆ ತಾವು ಬೇರೆ ಅರ್ಥವನ್ನು ಕಲ್ಪನೆ ಮಾಡಿಕೊಳ್ಳಬೇಕಾಗಿಲ್ಲ, ನಮಗೆ ಬೇಕಾಗಿರುವುದು We are interested in our money which has been invested there in the Company. ಈ ಅಭಿಪ್ರಾಯದಲ್ಲಿ ನಾವು ಹೋಗಬೇಕು. "As far as I am concerned" ನನ್ನ ಒಂದು ಅಭಿಪ್ರಾಯ ಹೇಳುತ್ತಿದ್ದೇನೆ. ಈ ಬಗ್ಗೆ ಅನೇಕ ಡಾಕ್ಯುಮೆಂಟರಿ ಎವಿಡೆನ್ಸ್ ಇದೆ. ಅದನ್ನು ನೋಡಿದರೆ ಯಾರಿಗಾದರೂ ಕೂಡ ನಾನು ಹೇಳಿದ ಒಂದು ಅಭಿಪ್ರಾಯವೇ ಬರುತ್ತದೆ ಎಂದು ಹೇಳುತ್ತೇನೆ. ಇದಕ್ಕೆ ಅನಾವಶ್ಯಕವಾಗಿ ಖರ್ಚು ಮಾಡುವ ಹಣವನ್ನು ಉಳಿಸಿ, ಇದರಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಿ ಇದರಲ್ಲಿ ಹೆಚ್ಚು ನಿವ್ವಳ ಲಾಭ ಬರುವಂತೆ ಮಾಡಬೇಕಾದರೆ ಇವರನ್ನು ಬದಲಾವಣೆ ಮಾಡುವುದು ಅನಿವಾರ್ಯ ಎಂದು ಹೇಳುತ್ತೇನೆ. ಎರಡನೆಯದಾಗಿ ಹೇಳಬೇಕಾದರೆ ಇದರ ಬಗ್ಗೆ ತಾವು independent judgement ಪ್ರಕಾರ ಮಾಡಿ No problem.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಸಾರಿ ಈ ಕಾರ್ಖಾನೆ ಬೇರೆಯವರಿಂದ ನಡೆಯಲ್ಲಿ, ಎಷ್ಟು ಉತ್ಪಾದನೆ ಬರುತ್ತದೋ ನೋಡೋಣ. ಇವರಿಗೇ ಈಗ ಏತಕ್ಕೆ ಪುನಃ ಅವಕಾಶ ಕೊಡಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮೊದಲೇ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು.—ಈಗ ಮಾನ್ಯ ಮಹದೇವರವರು ತಮ್ಮ ವಿಷಯವನ್ನು ಕೇಳಬಹುದು.

ಶ್ರೀ ಎಂ. ಮಹದೇವ್ (ನಂಜನಗೂಡು).—ಅದು ಯಾವ ವಿಷಯ.

ಅಧ್ಯಕ್ಷರು.—ತಮಗೇಗೊತ್ತಿಲ್ಲವೇ. ಆ ವಿಷಯ ಯಾವುದು ಎಂದರೆ re : Action against 600 officers who have secured jobs by providing false certificates.

(X) Sc/St ಸುಳ್ಳು ಸರ್ಟಿಫಿಕೆಟ್ ಪಡೆದು ನೌಕರಿ ಪಡೆದ ಬಗ್ಗೆ

ಶ್ರೀ ಎಂ. ಮಹದೇವ್.—ಸ್ವಾಮಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಸರಿನಲ್ಲಿ ಸುಮಾರು 600 ಜನ ಅಧಿಕಾರಿಗಳು ಸುಳ್ಳು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಅನೇಕ ಹುದ್ದೆಗಳನ್ನು ಪಡೆದುಕೊಂಡಿದ್ದಾರೆ. ಈ ರೀತಿ ಅನ್ಯಾಯ ವಾದರೆ ಅವರ ಜೀವನಕ್ಕೆ ತೊಂದರೆಯಾಗುವುದಿಲ್ಲವೇ ? ಈ 600 ಜನ ಅಧಿಕಾರಿಗಳಿಗೆ ಯಾರು ಕೆಲಸ ಕೊಟ್ಟಿದ್ದಾರೆ ಅವರನ್ನು ತೆಗೆಯಬೇಕು, ಇದರ ಮಾಹಿತಿಯನ್ನು ತಿಳಿಯದೇ ಯಾವ ಅಧಿಕಾರಿಗಳು ಇಂಥಾ ಕೆಲಸ ಮಾಡಿದ್ದಾರೋ ಅವರನ್ನು ಸಸ್ಪೆಂಡ್ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಇದುವರೆಗೆ ಸರ್ಕಾರದವರು ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸದಸ್ಯರು ಯಾವ ಇಲಾಖೆಯವರು ಎಂದು ಹೇಳಿದರೆ ಅನುಕೂಲವಾಗುತ್ತದೆ. ಅವರು ಅಸ್ಪಷ್ಟವಾಗಿ ಹೇಳಿದರೆ ವಿಚಾರ ಮಾಡುವುದು ಕಷ್ಟ. ಒಟ್ಟಿನಲ್ಲಿ ಹೇಳಬೇಕಾದರೆ ಅವರು ಶಿಕ್ಷಾರ್ಹರು. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನೆಲ್ಲಾ ವಿಚಾರ ಮಾಡಬೇಕೊ ಅದನ್ನು ಮಾಡುತ್ತೇವೆ. ಇದರ ಜೊತೆಗೆ ಮಾನ್ಯ ಸದಸ್ಯರ ಹತ್ತಿರ ಏನಾದರೂ ವಿವರಣೆ ಇದ್ದರೆ ಅದನ್ನೂ ಸಹ ಕಳುಹಿಸಿಕೊಟ್ಟರೆ ಅದನ್ನೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಮಹದೇವ್.—ಕರ್ನಾಟಕ ಯೂನಿವರ್ಸಿಟಿಯಲ್ಲಿ ಕಟ್ಟಿಮನಿ ಎಂಬುವರು ಈರೀತಿಯಾದ ಸುಳ್ಳು ಸರ್ಟಿಫಿಕೇಟನ್ನು ಪಡೆದುಕೊಂಡು ಹುದ್ದೆ ಪಡೆದಿದ್ದಾರೆ. ಪ್ರತಿಯೊಂದು ಪ್ರಶ್ನೆಗೂ ಮಾನ್ಯ ಲಕ್ಷ್ಮೀಸಾಗರ್‌ರವರು ಎದ್ದು ಬರುತ್ತಾರೆ. ಸರಿಯಾದ ಮಾಹಿತಿ ಇದ್ದರೂ ಕೂಡ ಈರೀತಿಯಾಗಿ ಅಸ್ಪಷ್ಟವಾದ ಉತ್ತರ ಕೊಟ್ಟರೆ ನಾವು ಹೇಗೆ ಪ್ರಸ್ತಾಪ ಮಾಡುವುದು.

ಅಧ್ಯಕ್ಷರು.—ತಾವು ಯಾವ ಇಲಾಖೆಯಲ್ಲಿ ಅಂತ ಹೇಳಿದರೆ ಆಗಕ್ಕೆ ಉತ್ತರ ಕೊಡುತ್ತಾರೆ.